ಲಿಖಿತ ಮೂಲಕ ಉತ್ತರಿಸುವ

ಕರ್ನಾಟಕ ವಿಧಾನ ಪರಿಷತ್ತು
ನೂರ ನಲವತ್ತನೆಯ ಅಧಿವೇಶನ
ಬುಧವಾರ, ದಿನಾಂಕ : 18 ನೇ ಮಾರ್ಚ್, 2020

ಅವಧಿಗೂ ಮೀರಿ ಅನ್ಯ ಇಲಾಖೆಯ ಅಧಿಕಾರಿಗಳು ಕರ್ತವ್ಯ ನಿರ್ವಹಿಸುತ್ತಿರುವ ಕುರಿತು

ಶ್ರೀರಘುನಾಥ್‌ರಾವ್‌ಮಲ್ಕಾಪೂರೆ(ವಿಧಾನಸಭೆಯಿಂದಚುನಾಯಿತರಾದವರು):-

1164 (1409) ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಲೋಕೋಪಯೋಗಿ ಮತ್ತು ಸಮಾಜ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಸಮಾಜ ಕಲ್ಯಾಣ ಇಲಾಖೆಯಲ್ಲಿ ವ್ಯವಸ್ಥಾಪಕರು/ಜಿಲ್ಲಾ ವ್ಯವಸ್ಥಾಪಕರು ವಿವಿಧ ವೃಂದದಲ್ಲಿ ನಿಯೋಜನೆ ಮೇಲೆ ಕಾರ್ಯ ನಿರ್ವಹಿಸುತ್ತಿರುವ ಅನ್ಯ ಇಲಾಖೆಯ ಅಧಿಕಾರಿಗಳೆಷ್ಟು ; ಎಷ್ಟು ಅವಧಿಯಿಂದ ಕಾರ್ಯ ನಿರ್ವಹಿಸುತ್ತಿದ್ದಾರೆ ಅಧಿಕಾರಿಯ ಹೆಸರು, ಇಲಾಖೆ, ಪದನಾಮದೊಂದಿಗೆ ವಿವರ ನೀಡುವುದು ;

(ಆ) ಕಳೆದ 4-5 ವರ್ಷಗಳಿಗೂ ಮೀರಿ ನಿಯೋಜನೆ ಮೇಲೆ ಮುಂದುವರೆದ ಅಧಿಕಾರಿಗಳೆಷ್ಟು ; (ಕಾರಣಗಳೊಂದಿಗೆ ಜಿಲ್ಲಾವಾರು ವಿವರ ನೀಡುವುದು)

(ಇ) ಕಳೆದ 4-5 ವರ್ಷಗಳಿಗೂ ಮೀರಿ ನಿಯೋಜನೆ ಮೇಲೆ ಮುಂದುವರೆಸಲು ನಿಯಮಗಳಲ್ಲಿ ಅವಕಾಶ ಇದೆಯೇ ; ಇಲ್ಲದಿದ್ದಲ್ಲಿ, 4-5 ವರ್ಷಗಳಿಗೂ ಮೀರಿ ಮುಂದುವರೆಸಲು ಕಾರಣಗಳೇನು ; (ಸಂಪೂರ್ಣ ಮಾಹಿತಿ ನೀಡುವುದು)

(ಈ) ಜಿಲ್ಲಾ ವ್ಯವಸ್ಥಾಪಕರು / ಉಪ ಪ್ರಧಾನ ವ್ಯವಸ್ಥಾಪಕರು ಮತ್ತು ಇತರ ಅಧಿಕಾರಿಗಳ ವೃಂದದ ಹುದ್ದೆಗಳಲ್ಲಿ ನಿಯೋಜನೆ ಮೀರಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿಗಳ ಪೈಕಿ ಎಷ್ಟು ಅಧಿಕಾರಿಗಳ ವಿರುದ್ಧ ಇಲಾಖೆಯಿಂದ ಇಲಾಖಾ ವಿಚಾರಣೆ ಆರಂಭಿಸಲಾಗಿದೆ ಹಾಗೂ ಅನ್ಯ ಇಲಾಖೆಯಿಂದ ಬಂದು ಸಮಾಜ ಕಲ್ಯಾಣ ಇಲಾಖೆಯಲ್ಲಿ ನಿಯೋಜನೆಗೊಂಡ ಅಧಿಕಾರ ದುರುಪಯೋಗಿಸಿಕೊಂಡ ಅಧಿಕಾರಿಗಳನ್ನು ಅವರ ಮಾತೃ ಇಲಾಖೆಗೆ ಹಿಂದಿರುಗಿಸದೇ ಇಲಾಖೆಯಲ್ಲಿ ಮುಂದುವರಿಸುತ್ತಿರುವುದು

ನಿಜವೇ ; ಹಾಗಿದ್ದಲ್ಲಿ, ನಿಯೋಜನೆಗೊಂಡ ಅಧಿಕಾರಿಗಳನ್ನು ಎಷ್ಟು ಕಾಲಮಿತಿಯೊಳಗೆ ಅವರ ಸೇವೆಯನ್ನು ಮಾತೃ ಇಲಾಖೆಗೆ ಹಿಂದಿರುಗಿಸಲಾಗುವುದು? (ಸಂಪೂರ್ಣ ವಿವರ ನೀಡುವುದು)